ದಿನಾಂಕಃ 01-07-2016 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯ್ತು

ಪಾಟೀ ಸವಾಲು : ಶ್ರೀ ಟಿ ಬಿ ಎಂ ವಕೀಲರಿಂದ

ತಾಳಗುಪ್ಪ ಖಾನೇಷುಮಾರಿ ನಂಬರು 13 ಹಾಗೂ 14 ಎರಡೂ ಒಂದರ ಪಕ್ಕದಲ್ಲಿ ಒಂದು ಇದೆ. ಖಾನೇಷುಮಾರಿ ನಂಬರು 13 ರ ಪಶ್ಚಿಮಕ್ಕೆ ಖಾನೇಷುಮಾರಿ ನಂಬರು 14 ಇದೆ.

ಸದರಿ ಎರಡೂ ಸ್ವತ್ತುಗಳು ಸಾಗರದಿಂದ ಜೋಗಕ್ಕೆ ಹೋಗುವ ಬಿ ಹೆಚ್ ರಸ್ತೆಯ ದಕ್ಷಿಣದ ಅಂಚಿನಲ್ಲಿದೆ. ಎರಡೂ ಸ್ವತ್ತುಗಳು ಒಂದಕ್ಕೊಂದು ಸಮಾನಾಂತರವಾಗಿದೆ. ಖಾನೇಷುಮಾರಿ ನಂಬರು 14 ನನ್ನ ಕುಟುಂಬದ ವಾಸದ ಮನೆ ಹಾಗೂ ಹಿತ್ತಲು ಇದೆ. 13 ರ ಖಾನೇಷುಮಾರಿ ಸ್ವತ್ತು ಮುಂಟುಗೋಡು ನಾರಾಯಣಪ್ಪನವರಿಗೆ ಸೇರಿದ ಸ್ವತ್ತಾಗಿರುತ್ತದೆ. ನಮ್ಮ 14ನೇ ಸ್ವತ್ತಿನ ಪಶ್ಚಿಮಕ್ಕೆ ಅಂಗಡಿ ಮತ್ತು ಮನೆಗಳು ಒಂದಕ್ಕೊಂದು ಸಾಲಾಗಿವೆ. 13 ರ ಸ್ವತ್ತಿನ ಪೂರ್ವಕ್ಕೆ ಉತ್ತರ ದಕ್ಷಿಣವಾಗಿ ಬಿ ಹೆಚ್ ರಸ್ತೆಗೆ ಸಂಪರ್ಕ ಹೊಂದುವ ಪಂಚಾಯತಿ ರಸ್ತೆ ಇದೆ ಎಂದರೆ ಸರಿ. 13 ಹಾಗೂ 14 ರ ಸ್ವತ್ತಿನ ನಡುವೆ ಬಿ ಹೆಚ್ ರಸ್ತೆಯಿಂದ ದಕ್ಷಿಣಕ್ಕೆ ನನ್ನ ಮನೆಗೆ ಹೋಗಲಿಕ್ಕೆ ಓಣಿ ಇದೆ ಎಂದರೆ ಸಾಕ್ಷಿಯು ಮನೆಯವರೆಗೆ ಮಾತ್ರ ಇದೆ ಎಂದು ಉತ್ತರಿಸಿರುತ್ತಾರೆ. ಸದರಿ ಓಣಿಯಿಂದ ಹೋಗಲು ನಮ್ಮ ಮನೆಯ ಪೂರ್ವದಲ್ಲಿ ಒಂದು ಬಾಗಿಲು ಇದೆ. ಬಿ ಹೆಚ್ ರಸ್ತೆಯ ದಕ್ಷಿಣಕ್ಕೆ ಚರಂಡಿ ಇದ್ದು , ಸದರಿ ಚರಂಡಿಯ ದಕ್ಷಿಣ ತುದಿಯಿಂದ ನಾನು ಹೇಳುವ ಬಾಗಿಲಿನ ದಕ್ಷಿಣದ ತುದಿವರೆಗೆ 54 ಅಡಿ ಇದೆ ಎಂದರೆ ಸಾಕ್ಷಿಯು ಹಿಂದೆ ಎಷ್ಟು ಅಡಿ ಬಾಗಿಲು ಇತ್ತು ಎಂದು ಗೊತ್ತಿಲ್ಲ ಎಂದು ಮುಂದುವರೆದು , ಮನೆ ಕಟ್ಟಿದ ನಂತರ ಆ ಬಾಗಿಲು ಹಿಂದೆ ಮುಂದೆ ವ್ಯಾತ್ಯಾಸವಾಗಿರಬಹುದು ಎಂದು ಸಾಕ್ಷಿ ನುಡಿದಿರುತ್ತಾರೆ.

ನಾನು ಮೇಲೆ ಹೇಳಿದ ಕಟ್ಟಡವನ್ನು 12 ವರ್ಷಗಳ ಹಿಂದೆ ಕಟ್ಟಿರುತ್ತೇನೆ. 14 ರ ಸ್ವತ್ತಿನ ರಸ್ತೆಯ ದಕ್ಷಿಣಕ್ಕೆ ಮನೆ ಇದ್ದು , ಅದರ ಹಿಂಭಾಗಕ್ಕೆ ಖಾಲಿ ಜಾಗ ಇದ್ದು , ಅದರ ಉದ್ದಕ್ಕೂ ಪೂರ್ವದಲ್ಲಿ ಉತ್ತರ ದಕ್ಷಿಣವಾಗಿ ಕಾಂಪೌಂಡ್ ಹಾಕಲಾಗಿದೆ.

ನಮ್ಮ ಕುಟುಂಬದಲ್ಲಿ 1993 ನೇ ಇಸವಿಯಲ್ಲಿ ಕಾರನ್ನು ತೆಗೆದುಕೊಂಡಿರುತ್ತೇನೆ. ಸದರಿ ನನ್ನ ಕಾರು 13 ನೇ ಸ್ವತ್ತಿನ ಪೂರ್ವ ದಿಕ್ಕಿನಲ್ಲಿರುವ ಪಂಚಾಯತಿ ರಸ್ತೆಯಿಂದ ಹೋಗಿ ನನ್ನ 14ನೇ ಸ್ವತ್ತಿನ ಹಿಂಭಾಗಕ್ಕೆ 13ನೇ ಸ್ವತ್ತಿನ ಮೂಲಕ ಹೋಗಬೇಕಾಗಿರುತ್ತದೆ.

ದಿ : 3-6-1959 ರಲ್ಲಿ ಮುಂಟಗೋಡು ನಾರಾಯಣಪ್ಪನವರಿಂದ 13ನೇ ಖಾನೆಷುಮಾರಿ ನಂಬರಿನಲ್ಲಿ ಬಿ ಹೆಚ್ ರಸ್ತೆಯ ದಕ್ಷಿಣದ ಚರಂಡಿಯ ದಕ್ಷಿಣದ ಅಂಚಿನಿಂದ 139 ಆಡಿಗಳನ್ನು ಬಿಟ್ಟು ನಂತರ ದಕ್ಷಿಣಕ್ಕೆ 12 ಅಡಿ ( ಉತ್ತರ ದಕ್ಷಿಣವಾಗಿ 12 ಅಡಿ ) ಪೂರ್ವ ಪಶ್ಚಿಮ 28 ಅಡಿ ಜಾಗ ಖರೀದಿಸಲಾಗಿದೆ ಎಂದರೆ ಸಾಕ್ಷಿಯು ಪೂರ್ವ ಪಶ್ಚಿಮ 28 ಅಡಿ ಅಳತೆಯನ್ನು ಕೊಟ್ಟಿರದೇ ಪೂರ್ವಕ್ಕೆ : ವಿ . ಪಿ . ರಸ್ತೆ , ಪಶ್ಚಿಮಕ್ಕೆ 14 ರ ಸ್ವತ್ತು ಎಂದು ಗಡಿ ಗುರುತಿಸಿದೆ, ಅಳತೆ ಅಡಿಗಳಲ್ಲಿ ನಮೂದಿಸಿಲ್ಲ ಎಂದು ಉತ್ತರಿಸಿರುತ್ತಾರೆ.

ಸದರಿ ಮುಂಟಗೋಡು ನಾರಾಯಣಪ್ಪನವರು ನೀಡಿರುವ ಜಾಗದಲ್ಲಿ ನಮಗೆ ಉತ್ತರ ದಕ್ಷಿಣವಾಗಿ ವಿವಾದವಿದೆ. ಸದರಿ ಮುಂಟಗೋಡು ನಾರಾಯಪ್ಪರಿಂದ ಖರೀದಿಸಿದ 12 X 28 ಅಡಿ ಸ್ವತ್ತಿನ ಉತ್ತರದಿಂದ ಉತ್ತರಕ್ಕೆ ಉತ್ತರ-ದಕ್ಷಿಣ 30 ಅಡಿ ಪೂರ್ವ ಪಶ್ಚಿಮ 30 ಅಡಿ ಸ್ವತ್ತನ್ನು ಮುಂಟಗೋಡು ನಾರಾಯಣಪ್ಪರವರ ಮಗ ಕೃಷ್ಣಮೂರ್ತಿ ( 1ನೇ ಪ್ರತಿವಾದಿ ) 2ನೇ ಪ್ರತಿವಾದಿಗೆ ದಿ : 10-05-1982 ರ ಕ್ರಯಪತ್ರದಡಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಕ್ರಯಪತ್ರದಲ್ಲಿ ಹೇಳಿರುವಷ್ಟು ಜಾಗ ಅಲ್ಲಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ಸದರಿ 2ನೇ ಪ್ರತಿವಾದಿ ಖರೀದಿಸಿದ ಸ್ವತ್ತಿನ ಉತ್ತರಕ್ಕೆ ಉತ್ತರ-ದಕ್ಷಿಣವಾಗಿ 15ವರೆ ಅಡಿ, ಪೂರ್ವ - ಪಶ್ಚಿಮ 37 ಅಡಿಗಳು ಸ್ವತ್ತನ್ನು 4ನೇ ಪ್ರತಿವಾದಿ ದಿನಾಂಕ: 12-4-1982 ರ ಕ್ರಯಪತ್ರದಡಿಯಲ್ಲಿ 1ನೇ ಪ್ರತಿವಾದಿಯಿಂದ ಖರೀದಿಸಿರುತ್ತಾರೆ. ಸದರಿ 4ನೇ ಪ್ರತಿವಾದಿ ಖರೀದಿಸಿದ ಸ್ವತ್ತು ಬಿ ಹೆಚ್ ರಸ್ತೆಯ ದಕ್ಷಿಣದ ಚರಂಡಿಯ ದಕ್ಷಿಣದ ಅಂಚಿನಿಂದ ಎಷ್ಟು ಅಡಿ ದೂರದಲ್ಲಿದೆ ಎಂದು ನನಗೆ ಗೊತ್ತಿಲ್ಲ. ಬಿ ಹೆಚ್ ರಸ್ತೆಯ ದಕ್ಷಿಣ ಚರಂಡಿಯ ದಕ್ಷಿಣದ ಅಂಚಿನಿಂದ 2ನೇ ಪ್ರತಿವಾದಿ ಖರೀದಿಸಿದ ಸ್ವತ್ತು ಎಷ್ಟು ದೂರದಲ್ಲಿದೆ ಎಂದು ಹೇಳಲು ಆಗುವುದಿಲ್ಲ.

4ನೇ ಪ್ರತಿವಾದಿ ತಾನು ಖರೀದಿಸಿದ 15ವರೆ ಅಡಿ ಜಾಗದ ಪೈಕಿ ಉತ್ತರದಿಂದ ದಕ್ಷಿಣದ ಕಡೆಗೆ 14ವರೆ ಅಡಿ ಜಾಗದಲ್ಲಿ ಮನೆ ಕಟ್ಟಿ ದಕ್ಷಿಣಕ್ಕೆ 1 ಅಡಿ ಖಾಲಿ ಬಿಟ್ಟು ಕೊಂಡಿದ್ದಾರೆ ಎಂದರೆ ಸರಿ. ಅದೇ ರೀತಿ 2ನೇ ಪ್ರತಿವಾದಿ ತನ್ನ ಜಾಗದಲ್ಲಿ ಲೈಸೆನ್ಸ್ ಪಡೆದು 4ನೇ ಪ್ರತಿವಾದಿಯ ಸ್ವತ್ತಿನ ದಕ್ಷಿಣಕ್ಕೆ ಅಂದರೆ

ಉತ್ತರದ ಕಡೆಗೆ 1 ಅಡಿ ಜಾಗ ಬಿಟ್ಟು ಉಳಿದ 20 ಅಡಿ ಜಾಗದಲ್ಲಿ ಮನೆ ಕಟ್ಟಿದ್ದಾನೆ ಎಂದರೆ ಸರಿ. 2ನೇ ಪ್ರತಿವಾದಿ ತನ್ನ ಮನೆಯನ್ನು ಕಟ್ಟಿ ನಂತರ ದಕ್ಷಿಣಕ್ಕೆ ಉಳಿದ 9 X 37 ಅಡಿ ಖಾಲಿ ಜಾಗಕ್ಕೆ ಪೂರ್ವ ಹಾಗೂ ದಕ್ಷಿಣದಲ್ಲಿ ಕಾಂಪೌಂಡ್ ಹಾಕಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ 14 ರ ಸ್ವತ್ತಿನ ಪೂರ್ವದ ಕಾಪೌಂಡ್‌ನಲ್ಲಿ 2ನೇ ಪ್ರತಿವಾದಿಯ ಮನೆಯ ಪಕ್ಕದ 9 ಅಡಿ ಜಾಗದಲ್ಲಿ ( ಮನೆಯಿಂದ ಸು 3 ಅಡಿ ದಕ್ಷಿಣಕ್ಕೆ) ಒಂದು ಕಬ್ಬಿಣದ ಗೇಟ್‌ನ್ನು ನನ್ನ ಕಾಂಪೌಂಡ್‌ಗೆ ಹಾಕಿರುತ್ತೇವೆ ಎಂದರೆ ಸಾಕ್ಷಿಯು 1978ನೇ ಇಸವಿಯಲ್ಲಿ ಸದರಿ ಗೇಟ್ ಹಾಕಲಾಗಿದೆ ಎಂದು ಸಾಕ್ಷಿ ನುಡಿಯುತ್ತಾರೆ.

ನನ್ನ 14 ರ ಸ್ವತ್ತು ನಮ್ಮ ತಂದೆ ಸೂರನ ಮಂಜಯ್ಯನವರು ಖರೀದಿಸಿದ ಸ್ವತ್ತಾಗಿರುತ್ತದೆ. ನನ್ನ ತಂದೆ 1972 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಾಯಿ ವೆಂಕಮ್ಮ , ಅಣ್ಣ ಗಣಪತಿ ಮತ್ತು ನಾನು ಹಾಗೂ ನನ್ನ ಇಬ್ಬರು ತಮ್ಮಂದಿರು ಸದರಿ ಸ್ವತ್ತಿನ ವಾರಸುದಾರರಾಗಿರುತ್ತೇವೆ.

ನಾವು ಕಬ್ಬಿಣದ ಗೇಟ್ ಹಾಕಿದ ಸಂದರ್ಭದಲ್ಲಿ 2ನೇ ಪ್ರತಿವಾದಿ ತನ್ನ ಜಾಗಕ್ಕೆ ತೊಂದರೆ ನೀಡುತ್ತಿರುವುದಾಗಿ ನಮ್ಮ ವಿರುದ್ದ ಬಹಳಷ್ಟು ಬಾರಿ ಕಂಪ್ಲೈಂಟು ವಗೈರೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. 1987ನೇ ಇಸವಿ ಓಪ್ರಿಲ್ ತಿಂಗಳ 3ನೇ ವಾರದಲ್ಲಿ ನಾವು 2ನೇ ಪ್ರತಿವಾದಿ ತನ್ನ ಮನೆಯ ದಕ್ಷಿಣದ 9

ಅಡಿ ಜಾಗದಲ್ಲಿ ದಕ್ಷಿಣದಲ್ಲಿ ಹಾಕಲಾಗಿದ್ದ ಕಾಂಪೌಂಡ್ ಗೋಡೆಯನ್ನು ಕೆಡವಿರುತ್ತೇವೆ ಎಂದರೆ ಸರಿಯಲ್ಲ. ಈ ವಿಚಾರವಾಗಿ 2ನೇ ಪ್ರತಿವಾದಿ ತಾನು ಖರೀದಿಸಿದ ಸ್ವತ್ತಿಗೆ ನಾವುಗಳು ಅಡ್ಡಿಪಡಿಸದಂತೆ ಮುನ್ಸೀಫ್ ನ್ಯಾಯಾಲದಲ್ಲಿ ಓ ಎಸ್ 169-87 ರಂತೆ ಇಂಜೆಂಕ್ಷನ್ ದಾವಾ ಸಲ್ಲಿಸಿದ್ದರು ಎಂದರೆ ಸರಿ . ಆಗ ನಮ್ಮ ಕುಟುಂಬದ ಸ್ವತ್ತಿಗೆ ಖಾತೆ ನಮ್ಮ ತಾಯಿ ವೆಂಕಮ್ಮನವರ ಹೆಸರಿನಲ್ಲಿತ್ತು. ಸದರಿ ದಾವೆಯನ್ನು ನನ್ನ ತಾಯಿ , ಅಣ್ಣ ಹಾಗೂ ನನ್ನ ವಿರುದ್ದ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ 2ನೇ ಪ್ರತಿವಾದಿಗೆ ಸೇರಿದ ಆತನ ಮನೆಯ ದಕ್ಷಿಣದ 9 ಅಡಿ ಜಾಗದಲ್ಲಿ 7 ಅಡಿ ಜಾಗ ನಮಗೆ ಸೇರಿದ್ದು ಎಂದು ತಕರಾರು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಮುಂದುವರೆದು ಬಿ ಹೆಚ್ ರಸ್ತೆಯ ದಕ್ಷಿಣದ ಚರಂಡಿ ಇತ್ತೀಚೆಗೆ ಅಗಲವಾಗಿದ್ದು ಆ ಕಾರಣಕ್ಕಾಗಿ 2ನೇ ಪ್ರತಿವಾದಿಯದಕ್ಷಿಣದ ಜಾಗ ನಮಗೆ ಸೇರುತ್ತದೆ ಎಂದು ತಕರಾರು ಸಲ್ಲಿಸಿರುತ್ತೇವೆ ಎಂದರೆ ನೆನಪಿಲ್ಲ. ಪ್ರಸ್ತುತ ದಾವಾದಲ್ಲಿ ಸಲ್ಲಿಸಿದ ತಕರಾರನ್ನೇ ಹಿಂದಿನ ದಾವೆಯಲ್ಲಿ ಮಾಡಿರುತ್ತೇವೆ ಎಂದರೆ ಸರಿ . ಹಿಂದೇ ಸಲ್ಲಿಸಿದ್ದ ದಾವೆಯಲ್ಲಿ ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡಿ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ .

ಸದರಿ ದಾವಾದಲ್ಲಿ ನ್ಯಾಯಾಲಯದ ಆಯುಕ್ತರು ಸಲ್ಲಿಸಿದ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಡಿ -1 ಎಂದು ಗುರುತಿಸಲಾಯಿತು. ನಿಪಿ -2 ದಾಖಲೆಯಲ್ಲಿ ನನ್ನ ತಂದೆ ಮುಂಟಗೋಡು ನಾರಾಯಣಪ್ಪರಿಂದ ಬಿ ಹೆಚ್ ರಸ್ತೆಯಿಂದ ದಕ್ಷಿಣಕ್ಕೆ ನಮ್ಮ ಮನೆಯ ಬಾಗಿಲಿನವರೆಗೆ ಓಣಿಯನ್ನು ಖರೀದಿಸಿದ್ದು ,

ನಂತರ ಉಳಿದ ಸ್ವತ್ತಿನ ಹಿಂಭಾಗದಲ್ಲಿ ಅಂದರೆ ದಕ್ಷಿಣಕ್ಕೆ 13ನೇ ಖಾನೇಷುಮಾರಿ ನಂಬರಿನಲ್ಲಿ ರಸ್ತೆಯ ಚರಂಡಿಯ ದಕ್ಷಿಣದ  ಅಂಚಿನಿಂದ 139 ಅಡಿಗಳನ್ನು ಬಿಟ್ಟು ನಂತರ 12 ಅಡಿ ಖಾಲಿ ಜಾಗ ಖರೀದಿಸಿರುತ್ತಾರೆ.

ರಸ್ತೆಯ ಚರಂಡಿಯ ದಕ್ಷಿಣದ ಅಂಚಿನಿಂದ ನಮ್ಮ ಮನೆಯ ಬಾಗಿಲಿನ ದಕ್ಷಿಣದ ಅಂಚಿನವರೆಗೆ 54 ಅಡಿಗಳು ಇವೆ ಎಂದು ನಿಪಿ -2 ರಲ್ಲಿ ಬರೆಯಲಾಗಿದೆ ಎಂದರೆ ಸರಿ. ನಿಡಿ -1 ದಾಖಲೆಯ ಸ್ಕೇಚ್‌ನಲ್ಲಿ ಡಿ-ಡಿ-1 ಎಂದು ನಮೂದಿಸಲಾಗಿರುವುದು ನಮ್ಮ ಮನೆಯ ಬಾಗಿಲು ಎಂದರೆ ಸರಿ. ನಿಡಿ -1 ದಾಖಲೆಯಲ್ಲಿ ಚರಂಡಿಯ ದಕ್ಷಿಣದಿಂದ ಬಾಗಿಲಿನ ದಕ್ಷಿಣದ ಅಂಚಿನವರೆಗೆ 54 ಅಡಿಗಳನ್ನು ಎಲ್ –ಡಿ ಎಂದು ಗುರುತಿಸಲಾಗಿದೆ ಎಂದರೆ ಸಾಕ್ಷಿಯು ಅಳತೆ ಮಾಡಿರುವುದು  ತಪ್ಪಾಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಾವೆಯಲ್ಲಿ ಆಯುಕ್ತರು ಸ್ಥಳ ಪರಿಶೀಲನೆ ಮಾಡಲು ಹೋದಾಗ ನಮ್ಮ ಮನೆಯ ಪೂರ್ವದ ಬಾಗಿಲನ್ನು ಇಟ್ಟಿಗೆ ಕಟ್ಟಿ ಮುಚ್ಚಲು ಪ್ರಯತ್ನಿಸಿದ್ದ ವಿಚಾರವಾಗಿ ಆಯುಕ್ತರು ತಮ್ಮ ವರದಿ ನಿಡಿ -1 ರಲ್ಲಿ ಬರೆದಿದ್ದಾರೆ ಎಂದರೆ ಸಾಕ್ಷಿಯು , ಬಾಗಿಲು ಹಳೆಯದಾದ ಕಾರಣ ಇಟ್ಟಿಗೆ ಹಾಕಲಾಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ.

( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣ ಮಾಡಿದೆ)

ಓ ಹೇ ಕೇ ಸ ಇ ಒ

( ಪುಟ್ಟರಾಜು )
ಅಪರ ಸಿವಿಲ್ ಜಡ್ಜ್ ಸಾಗರ